541

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಅಭಿಯಂತರವರ ಕಛೇರಿ, ರಾಜರಾಜೇಶ್ವರಿನಗರ ವಲಯ
18ನೇ ಕ್ರಾಸ್, ಐಡಿಯಲ್ ಹೋಮ್ಸ್, ರಾಜರಾಜೇಶ್ವರಿನಗರ, ಬೆಂಗಳೂರು- 98

ಸಂಖ್ಯೆ.ಮು.ಅ/ರಾ.ರಾ.ನ.ವ/ಪಿಆರ್/ /2020-21 ದಿನಾಂಕ:26.03.2020

ಪರಿವೀಕ್ಷಣಾ ವರದಿ

ವಿಷಯ:- CONSTRUCTION OF MPED BUILDING (GOVT SCHOOL) AT JALAHALLI VILLAGE IN WARD NO.16 ಕಾಮಗಾರಿಯ ಪರಿವೀಕ್ಷಣಾ ವರದಿ ನೀಡುವ ಬಗ್ಗೆ.

ಉಲ್ಲೇಖ:-ಬಿಬಿಎಂಪಿ ಸದಸ್ಯರು ವಾರ್ಡ್ ನಂ.16 ಜಾಲಹಳ್ಳಿ ರವರ ಪತ್ರ ದಿನಾಂಕ:21.03.2020

******

ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ ವಾರ್ಡ್ ನಂ.16 ರ ಜಾಲಹಳ್ಳಿ ವಾರ್ಡ್ ವ್ಯಾಪ್ತಿಯಲ್ಲಿ CONSTRUCTION OF MPED BUILDING (GOVT SCHOOL) AT JALAHALLI VILLAGE IN WARD NO.16 ರಲ್ಲಿ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲು ರೂ.500.00 ಲಕ್ಷಗಳಿಗೆ 2018-19ನೇ ಸಾಲಿನ ಪಾಲಿಕೆಯ ಲೆಕ್ಕ ಆಯವ್ಯಯದ ಲೆಕ್ಕಶೀರ್ಷಿಕ ಪಿ-3461 ಅಡಿಯಲ್ಲಿ ಮತ್ತು 2018-19ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯ ದರದಂತೆ ಅಂದಾಜು ಪಟ್ಟಿ ಮಂಜೂರಾಗಿದ್ದು, ಅದರಂತೆ ಟೆಂಡರ್ ಕರೆದು ಸದರಿ ಕಾಮಗಾರಿಯ ಕಾರ್ಯಾದೇಶ ಸಂಖ್ಯೆ: EE(P)/RRN/W.O/13/2019-20 Dtd :02.08.2019 ರಂದು ಶ್ರೀ.ಪುರುಷೋತ್ತಮ್ ರಾಜು ರವರಿಗೆ ನೀಡಲಾಗಿರುತ್ತದೆ.

ಉಲ್ಲೇಖ (1) ರಲ್ಲಿ ವಿವರಿಸಿರುವಂತೆ CONSTRUCTION OF MPED BUILDING (GOVT SCHOOL) AT JALAHALLI VILLAGE IN WARD NO.16 ಕಟ್ಟಡ ಕಾಮಗಾರಿಯನ್ನು ಪ್ರಾರಂಭಿಸಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಈಗ ನಿರ್ಮಿಸುತ್ತಿರುವ ಕಟ್ಟಡದ ಪಕ್ಕದಲ್ಲಿರುವ ರಸ್ತೆಗಳು ಕಿರಿಯದಾಗಿದ್ದು, ವಾಹನ ನಿಲುಗಡೆಗೆ ಅವಕಾಶವಿರುವುದಿಲ್ಲ. ಸದರಿ ಕಟ್ಟಡದ ಜಾಗವು ಜನನಿಬಿಡ ಪ್ರದೇಶವಾಗಿದ್ದು, ಮಾರುಕಟ್ಟೆ ಸ್ಥಳವಾಗಿದ್ದು, ವಾಹನಗಳ ಸಂಖ್ಯೆ ಹೆಚ್ಚಾಗಿದ್ದು, ಕಿರಿದಾದ ರಸ್ತೆಗಳಲ್ಲಿ ವಾಹನಗಳನ್ನು ನಿಲ್ಲಿಸುವುದರಿಂದ ಸಾರ್ವಜನಿಕರಿಗೆ ಓಡಾಡಲು ಅನಾನುಕೂಲವಾಗಿರುತ್ತದೆ. ಆದ್ದರಿಂದ ಸದರ ಕಟ್ಟಡದಲ್ಲಿ ಸೆಲ್ಲರ್ ನಿರ್ಮಿಸಿ ವಾಹನ ನಿಲುಗಡೆಗೆ ಅವಕಾಶ ಕಲ್ಪಿಸಿಕೊಡಲು ಉಲ್ಲೇಖ(1) ರಲ್ಲಿ ಮಾನ್ಯ ವಾರ್ಡ್‌ನ ಸದಸ್ಯರು ಕೋರಿರುತ್ತಾರೆ.

ಸದರಿ ಕಾಮಗಾರಿಯಾದ CONSTRUCTION OF MPED BUILDING (GOVT SCHOOL) AT JALAHALLI VILLAGE IN WARD NO.16 ಕಟ್ಟಡ ಕಾಮಗಾರಿಯ ಮೂಲ ಅಂದಾಜು ಪಟ್ಟಿಯಲ್ಲಿ ನೆಲಮಹಡಿ, ಮೊದಲನೆ ಮಹಡಿ, 2ನೇ ಮಹಡಿ ಮತ್ತು 3ನೇ ಮಹಡಿ ನಿರ್ಮಿಸಲು, ಅನುವು ಮಾಡಲಾಗಿರುತ್ತದೆ. ಆದರೆ ಉಲ್ಲೇಖ (1)ರಲ್ಲಿ ಕೋರಿರುವಂತೆ ಸದರಿ ಕಟ್ಟಡದಲ್ಲಿ ಸೆಲ್ಲರ್ ನಿರ್ಮಿಸಿ ವಾಹನ ನಿಲುಗಡೆಗೆ ಅವಕಾಶ ಕಲ್ಪಿಸಲು ಕಾಮಗಾರಿಯ ಪರಿವೀಕ್ಷಣಾ ದಿನಾಂಕ:24.03.2020 ರಂದು ಮುಖ್ಯ ಅಭಿಯಂತರರು ರಾರಾನಗರ, ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಸಹಾಯಕ ಅಭಿಯಂತರರು ರವರೊಡನೆ ಪರಿವೀಕ್ಷಣೆ ಮಾಡುವಾಗ ಸದರಿ ಕಟ್ಟಡದ ಜಾಗವು ಜನನಿಬಿಡ ಪ್ರದೇಶವಾಗಿದ್ದು, ಮಾರುಕಟ್ಟೆ ಸ್ಥಳವಾಗಿದ್ದು, ವಾಹನಗಳ ಸಂಖ್ಯೆ ಹೆಚ್ಚಾಗಿದ್ದು, ಕಿರಿದಾದ ರಸ್ತೆಗಳಲ್ಲಿ ವಾಹನಗಳನ್ನು ನಿಲ್ಲಿಸುವುದರಿಂದ ಸಾರ್ವಜನಿಕರಿಗೆ ಓಡಾಡಲು ಅನಾನುಕೂಲವಾಗಿರುವುದು ಕಂಡು ಬಂದಿದ್ದು,

ಪು.ತಿ.ನೋ...

Scanned with CamScanner

ಅದರಂತೆ ಸದರಿ ಕಟ್ಟಡದಲ್ಲಿ ಸೆಲ್ಲರ್ ನಿರ್ಮಿಸಿ ವಾಹನ ನಿಲುಗಡೆಗೆ ಅತ್ಯವಶ್ಯಕವಿದ್ದು. ಮೂಲ ಅಂದಾಜು ಪಟ್ಟಿಯಲ್ಲಿರುವ ಪರಿಮಾಣುಗಳನ್ನು ಪರಿಶೀಲಿಸಿದ್ದು, ಸ್ಥಳದಲ್ಲಿ ಚರ್ಚಿಸಿದಂತೆ. ತುಲಾನತ್ಮಕ ಪಟ್ಟಿಯೊಂದಿಗೆ ಮಾರ್ಪಾಡು ಅಂದಾಜು ಪಟ್ಟಿಯನ್ನು ಮಂಡಿಸಿ.

ಮುಖ್ಯ ಅಭಿಯಂತರರು
ರಾಜರಾಜೇಶ್ವರಿನಗರ ವಲಯ

ರವರಿಗೆ,
ಕಾರ್ಯಪಾಲಕ ಅಭಿಯಂತರರು(ಯೋಜನೆ)
ರಾಜರಾಜೇಶ್ವರಿನಗರ ವಲಯ

Scanned with CamScanner